**ಅ.ದಾ. ಸಂಖ್ಯೆ: 250 / 2020**
**ಪಿ.ಡಬ್ಲ್ಯೂ -01**

ದಿನಾಂಕಃ **18-11-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು :- ಪ್ರತಿವಾದಿಯ** ಪರ ಶ್ರೀ. **ಕೆ.ಆರ್.ಸಿ.** ವಕೀಲರಿಂದ :-

ಕೆಂಪದಾಸಯ್ಯ ಯಾರು ಎಂದರೆ ಸಾಕ್ಷಿ ನನ್ನ ಮುತ್ತಾತ ಎಂದು ನುಡಿಯುತ್ತಾರೆ. ಸದರಿ ಕೆಂಪದಾಸಯ್ಯ ನವರು ಮೂಲ ಯಾವ ಊರಿನವರು ಎಂದರೆ ಸಾಕ್ಷಿ ಸೂರಪ್ಪನಹಳ್ಳಿ ಗ್ರಾಮ ಎಂದು ನುಡಿಯುತ್ತಾರೆ. ಸದರಿ ಕೆಂಪದಾಸಯ್ಯ ನವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ 3 ಎಂದು ನುಡಿಯುತ್ತಾರೆ. ಸದರಿಯವರ ಹೆಸರು ಕಾಳಗುಡ್ಡಯ್ಯ, ಕೆಂಪಯ್ಯ, ವೀರಗುಡ್ಡಯ್ಯ ಎಂದು ನುಡಿಯುತ್ತಾರೆ.

ಕಾಳಗುಡ್ಡಯ್ಯನವರಿಗೆ ಯಾವ ಆಧಾರದ ಮೇಲೆ ದಾವ ಸ್ವತ್ತು ಹಕ್ಕು ಬದಲಾವಣೆ ಆಗಿರುತ್ತದೆಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಯಾವ ವರ್ಷದಲ್ಲಿ ಸದರಿ ಕಾಳಗುಡ್ಡಯ್ಯನವರ ಹೆಸರಿಗೆ ಹಕ್ಕು ಬದಲಾವಣೆ ಆಗಿರುತ್ತದೆಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕಾಳಗುಡ್ಡಯ್ಯನವರು ಯಾವಾಗ ಮರಣ ಹೊಂದಿರುತ್ತಾರೆಂದರೆ ಸಾಕ್ಷಿ 1972 ಎಂದು ನುಡಿಯುತ್ತಾರೆ. ಆ ಸಂಬಂಧ ಕಾಳಗುಡ್ಡಯ್ಯನವರ ಮರಣ ಪ್ರಮಾಣಪತ್ರವನ್ನು ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ವಕೀಲರಿಗೆ ಕೊಟ್ಟಿರುತ್ತೇನೆ ಅವರಿಗೆ ಕೇಳಬೇಕು ಎಂದು ನುಡಿಯುತ್ತಾರೆ.

ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತೀರಿ ಹಾಗೂ ಅವುಗಳಲ್ಲಿ ಇರುವ ಮಾಹಿತಿಯನ್ನು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-2 ಪಹಣಿ ಪತ್ರಿಕೆಯನ್ನು ತೋರಿಸಲಾಗಿ ಸದರಿ ಪಹಣಿ ಪತ್ರಿಕೆಯಲ್ಲಿ ಕಾಳಗುಡ್ಡಯ್ಯ ಬಿನ್ ಹೊನ್ನಪ್ಪ ಎಂದು ಇದೆ ಸದರಿಯವರು ಯಾರು ಎಂದರೆ ಸಾಕ್ಷಿ ಕಾಳಗುಡ್ಡಯ್ಯ ನನ್ನ ತಾತ ಆದರೆ ಅವರ ತಂದೆಯ ಹೆಸರನ್ನು ಕಂಪ್ಯೂಟರಿನಲ್ಲಿ ಮಿಸ್ಟೇಕ್ ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಪಹಣಿಯನ್ನು ತಿದ್ದುಪಡಿ ಮಾಡಬೇಕು ಎಂದು ನೀವು ಅರ್ಜಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ರಾಮಯ್ಯನವರು ಕಾಳಗುಡ್ಡಯ್ಯನವರ ಮಗ ಎಂದು ತೋರಿಸಲು ನ್ಯಾಯಾಲಯಕ್ಕೆ ಏನಾದರೂ ದಾಖಲೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ವಂಶವೃಕ್ಷ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-9 ರ ವಂಶವೃಕ್ಷ ಹೊರತು ಪಡಿಸಿ ತಾಲ್ಲೂಕು ಕಚೇರಿಯಿಂದ ವಂಶವೃಕ್ಷ ದೃಢೀಕರಣ ಪತ್ರವನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಹಾಜರು ಪಡಿಸುತ್ತೇನೆಂದು ನುಡಿಯುತ್ತಾರೆ. ನೀವು ನಿಮ್ಮ ತಂದೆ ರಾಮಯ್ಯ ಎಂದು ಹೇಳುವವರು ಸದರಿ ರಾಮಯ್ಯ ನವರು ಯಾವಾಗ ಮರಣ ಹೊಂದಿರುತ್ತಾರೆಂದರೆ ಸಾಕ್ಷಿ 2006 ರಲ್ಲಿ ಎಂದು ನುಡಿಯುತ್ತಾರೆ. ಸದರಿ ರಾಮಯ್ಯನವರ ಮರಣ ಪ್ರಮಾಣಪತ್ರವನ್ನು ಹಾಜರು ಪಡಿಸಲು ನಿಮಗೆ ತೊಂದರೆ ಇರುವುದಿಲ್ಲವಾ ಎಂದರೆ ಸಾಕ್ಷಿ ಇಲ್ಲ ಹಾಜರು ಪಡಿಸುತ್ತೇನೆಂದು ನುಡಿಯುತ್ತಾರೆ.

ನಿಪಿ-2 ರಲ್ಲಿ RRT(D)-45/2015-16 ಪ್ರಕರಣ ನಮೂದು ಇದ್ದು ಸದರಿ ಪ್ರಕರಣದ ದಾಖಲೆಗಳನ್ನು ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. RRT(D)-45/2015-16 ಪ್ರಕರಣದಲ್ಲಿ ಯಾರು ಯಾರು ಪಕ್ಷಗಾರರು ಇದ್ದರು ಎಂದರೆ ಸಾಕ್ಷಿ ತಹಶೀಲ್ದಾರ್ ನ್ಯಾಯಾಲಯದಲ್ಲಿ ಕೇಸು ಇದ್ದು ಯಾರು ಯಾರು ಪಕ್ಷಗಾರರು ಎಂದು ದಾಖಲೆ ನೋಡಬೇಕು ಎಂದು ನುಡಿಯುತ್ತಾರೆ. RRT(D)-45/2015-16 ಪ್ರಕರಣದಲ್ಲಿ ಏನು ಆದೇಶ ಆಗಿರುತ್ತದೆಂದರೆ ಸಾಕ್ಷಿ ನಮ್ಮದೇ ಎಂದು ಆದೇಶ ಆಗಿರುತ್ತದೆಂದು ನುಡಿಯುತ್ತಾರೆ. RRT(D)-45/2015-16 ಪ್ರಕರಣದ ಆದೇಶ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಿಮಗೆ ತೊಂದರೆ ಇರುವುದಿಲ್ಲವಾ ಎಂದರೆ ಸಾಕ್ಷಿ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-10 ರ ದಾಖಲೆಯಲ್ಲಿ ಬಾಜುದಾರರ ಹೆಸರಲ್ಲಿ ಪ್ರತಿವಾದಿಯ ಹೆಸರು ಬರುತ್ತಿದ್ದೀರಲಿಲ್ಲ ಎಂದರೆ ಸಾಕ್ಷಿ ನಾವು ದಾವೆಯನ್ನು ಸಲ್ಲಿಸಿದಾಗ ಪಹಣಿಯಲ್ಲಿ ಅವರ ಹೆಸರು ಬರುತ್ತಿದ್ದಿರಲಿಲ್ಲ ಸರ್ಕಾರಕ್ಕೆ ಮುಟ್ಟುಗೋಲು ಎಂದು ಬರುತ್ತಿತ್ತು ಎಂದು ನುಡಿಯುತ್ತಾರೆ. ನಿಪಿ-4 ರ ಕಾಲಂ ನಂಬರ್-12 ರಲ್ಲಿ ಕೆಂಪಯ್ಯ ಪೌತಿ ಮಗ ಗಂಗಯ್ಯ ಎಂದು ಹೆಸರು ಬರುತ್ತಿದೆ ಎಂದರೆ ಸಾಕ್ಷಿ ಅವರು ಯಾರು ಸ್ವಾಧೀನದಲ್ಲಿ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ನೀವು ದಾವ ಸ್ವತ್ತಿನ ಸ್ವಾಧೀನದಲ್ಲಿ ಇದ್ದೀರಿ ಎಂದು ತೋರಿಸಲು ನ್ಯಾಯಾಲಯಕ್ಕೆ ಏನಾದರೂ ದಾಖಲೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ನಾವು ಉಳುಮೆ ಮಾಡುತ್ತಿದ್ದೇವು ಎಂದು

ನುಡಿಯುತ್ತಾರೆ. ಸರ್ವೆ ನಂಬರ್-46/2 ರಲ್ಲಿ ಒಟ್ಟು ಎಷ್ಟು ನಕಾಶೆ ದಾರಿಗಳು ಇವೆ ಎಂದರೆ ಸಾಕ್ಷಿ ನಕಾಶೆ ದಾರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್-46/2 ಕ್ಕೆ ನೀವು ಹೋಗಬೇಕಾದರೆ ಯಾವ ಜಮೀನುಗಳನ್ನು ದಾಟಿ ಹೋಗುತ್ತೀರಿ ಎಂದರೆ ಸಾಕ್ಷಿ ಉತ್ತರಕ್ಕೆ ಗೋಮಾಳ ಜಮೀನು ಇದ್ದು ಆದರೆ ಅದರಲ್ಲಿ ಅನುಭೋಗ ಮೋಟಯ್ಯ ಇದ್ದು ಸದರಿ ಜಮೀನಿನ ಮೂಲಕ ಹಾಗೂ ಸರ್ವೆ ನಂಬರ್-46/1 ರಲ್ಲಿ ರಂಗಪ್ಪ ರವರು ಇದ್ದು ಸದರಿ ಜಮೀನು ಮೂಲಕ ಮತ್ತು ಸರ್ವೆ ನಂಬರ್-45/2 ರ ಜಮೀನಿನ ಮೂಲಕ ಹೋಗುತ್ತೇವೆಂದು ನುಡಿಯುತ್ತಾರೆ. ಸರ್ವೆ ನಂಬರ್-46/2, 46/3ಎ ಮತ್ತು 45/2 ರ ಒಟ್ಟು 1 ಎಕರೆ 34 ಗುಂಟೆ ಜಮೀನಿಗೆ ಸೇರಿ ಕಲ್ಲುಕುಚ್ಚ ಇದೆ ಎಂದರೆ ಸಾಕ್ಷಿ ಅವರು ನಮಗೆ ಗೊತ್ತಿಲ್ಲದ ಹಾಗೆ ಹಾಕಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ.

ಪ್ರಸ್ತುತ ದಾವ ಸ್ವತ್ತಿನಲ್ಲಿ ಏನು ಬೆಳೆ ಇದೆ ಎಂದರೆ ಸಾಕ್ಷಿ ಅಡಿಕೆ ಮತ್ತು ತೆಂಗು ಇದೆ ಎಂದು ನುಡಿಯುತ್ತಾರೆ. ಒಟ್ಟು ಎಷ್ಟು ಅಡಿಕೆ ಹಾಗೂ ತೆಂಗಿನ ಮರಗಳು ಇದೆ ಎಂದರೆ ಸಾಕ್ಷಿ 300 ಅಡಿಕೆ ಮರಗಳು ಹಾಗೂ 12 ತೆಂಗು ಮರಗಳು ಇದೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನಲ್ಲಿ ತೆಂಗಿನ ಮರಗಳು ಇರುವುದಿಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನಲ್ಲಿ ಏನು ಅಸ್ತಿತ್ವದಲ್ಲಿ ಇದೆ ಎಂದು ಸ್ಥಳ ಪರಿಶೀಲನೆ ಮಾಡಲು ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಲು ನಿಮಗೆ ಏನು ತೊಂದರೆ ಇರುವುದಿಲ್ಲವಾ ಎಂದರೆ ಸಾಕ್ಷಿ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ಈಗ ಸಾಕ್ಷಿಗೆ ಪೋಟೋ ಕಾಪಿಯ ದೂರನ್ನು ತೋರಿಸಲಾಗಿ ನೀವು ದಿಃ 10-09-2020 ರಂದು ಪ್ರತಿವಾದಿಯು ದಾವ ಸ್ವತ್ತನ್ನು ಅಕ್ರಮವಾಗಿ ವಶಪಡಿಸಿಕೊಂಡಿರುತ್ತಾರೆಂದು ತಹಶೀಲ್ದಾರ್ ರವರಿಗೆ ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹಾಗೂ ಸದರಿ ಜಮೀನನ್ನು ಬಿಡಿಸಿಕೊಡಬೇಕು ಎಂದು ಮನವಿ ಸಹ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದೂರಿನನ್ವಯ ತಹಶೀಲ್ದಾರ್ ರವರು ಕುದೂರು ಪೊಲೀಸ್ ಠಾಣೆ, ಕಂದಾಯ ಇನ್ಸೆಕ್ಟರ್ ಮತ್ತು ಮೋಜಿಣಿ ಅಧಿಕಾರಿ ಯವರಿಗೆ ಸ್ಥಳ ತನಿಖೆ ಮಾಡಲು ನೋಟಿಸ್ ನೀಡಿದ್ದರು ಹಾಗೂ ನಿಮಗೂ ನೋಟಿಸ್ ಕೊಟ್ಟಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ಪ್ರಕಾರ ಕಂದಾಯ ಇನ್ಸಪೆಕ್ಟರ್ ರವರು ಏನು ಕ್ರಮ ಕೈಗೊಂಡಿರುತ್ತಾರಂದರೆ ಸಾಕ್ಷಿ ಅವರು

ಬಂದ್ದಿದಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸೆಕ್ರಟರಿ ಹಾಗೂ ಗ್ರೇಡ್-2 ಅಧಿಕಾರಿ ಬಂದಿದ್ದರು ಎಂದು ನುಡಿಯುತ್ತಾರೆ. ಸದರಿ ಸೆಕ್ರಟರಿ ಹಾಗೂ ಗ್ರೇಡ್-2 ಅಧಿಕಾರಿ ಏನು ಕ್ರಮ ಕೈಗೊಂಡಿರುತ್ತಾರೆಂದರೆ ಸಾಕ್ಷಿ ಪ್ರತಿವಾದಿಗೆ ಜಾಗ ಬಿಟ್ಟುಕೊಡಿ ಎಂದು ಹೇಳಿದ್ದರು ಅವರು ಇಲ್ಲ ನಾವು ಸಿವಿಲ್ ನ್ಯಾಯಾಲಯಕ್ಕೆ ಹೋಗುತ್ತೇವೆಂದು ಹೇಳಿದ್ದರು ಎಂದು ನುಡಿಯುತ್ತಾರೆ.

ಪಹಣಿ ಹೊರತು ಪಡಿಸಿ ನಿಮ್ಮ ಹೆಸರಿಗೆ ಯಾವುದೇ ರೆವಿನ್ಯೂ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿ ಪಹಣಿ ಮತ್ತು ಮ್ಯುಟೇಷನ್ ಇದೆ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಕಾಳಗುಡ್ಡಯ್ಯನವರ ಮರಣ ನಂತರ ಅವರ ಮಕ್ಕಳು ಭಾಗ ಮಾಡಿಕೊಂಡಿರುತ್ತಾರೆಂದು ಹೇಳಿದ್ದು ಯಾವ ರೂಪದಲ್ಲಿ ಭಾಗ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ ಹಿರಿಯರ ಸಮಕ್ಷಮ ಬಾಯಿ ಮಾತಿನಲ್ಲಿ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಸದರಿ ಭಾಗ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬಾಯಿ ಮಾತಿನ ಭಾಗದ ಪ್ರಕಾರ ಯಾರು ಯಾರಿಗೆ ಯಾವ ಯಾವ ಸ್ವತ್ತುಗಳು ಹೋಗಿರುತ್ತದೆಂದರೆ ಸಾಕ್ಷಿ ನನ್ನ ತಂದೆಯವರ ಭಾಗದ ಬಗ್ಗೆ ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ಭಾಗದ ಪ್ರಕಾರ ಮ್ಯುಟೇಷನ್ ಆಗಿರುತ್ತದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಭಾಗ ಆಗಿರುವುದಿಲ್ಲ ಹಾಗೂ ದಾವ ಸ್ವತ್ತು ನಿಮ್ಮ ಕುಟುಂಬದ ಸ್ವತ್ತು ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಪ್ರತಿವಾದಿಯು ನಿಮಗೆ ದಾವ ಸ್ವತ್ತನ್ನು ಮರು ಸ್ವಾ ಧೀನ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿ ನಾವು ಸ್ವಲ್ಪ ಭಾಗದಲ್ಲಿ ಇದ್ದೇವೆಂದು ನುಡಿಯುತ್ತಾರೆ. ಎಷ್ಟು ಭಾಗದಲ್ಲಿ ಇದ್ದೀರಿ ಎಂದರೆ ಸಾಕ್ಷಿ 12-15 ಗುಂಟೆಯಲ್ಲಿ ಇದ್ದೇವಂದು ನುಡಿಯುತ್ತಾರೆ. ನೀವು ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರದ ಕಾರಣ ನಿರ್ದಿಷ್ಟವಾಗಿ ಎಷ್ಟು ಸ್ವಾಧೀನದಲ್ಲಿ ಇದ್ದೀರಿ ಎಂದು ಹೇಳಲ ಬರುತ್ತಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಪಿ-5 ರ ಕಾಲಂ ನಂಬರ್-12 ರಲ್ಲಿ ಗಂಗಯ್ಯ ಎಂಬುವರ ಹೆಸರು ನಮೂದು ಆಗಿದೆ ಎಂದರೆ ಸಾಕ್ಷಿ ಅವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಅ.ದಾ. ಸಂಖ್ಯೆ: 250 / 2020**
**ಪಿ.ಡಬ್ಲ್ಯೂ -01**

**ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರು ಮುಂದುವರಿದ ವಾಟೀ ಸವಾಲಿಗೆ ಸಮಯ ಕೋರಿದ್ದರಿಂದ ವಾಟೀ ಸವಾಲು ಮುಂದೂಡಲಾಯಿತು.**

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.